ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವಶ್ಯಕತೆಗಳನ್ನು ಯಾವಾಗಲೂ ನಾವು ಅವಲಂಬಿಸ ಬೇಕೇ ಹೊರತು, ಬೇರೆ ಯಾವುದನ್ನೂ ಅಲ್ಲ. ಈಗಾಗಲೇ ಇರತಕ್ಕಂತಹ ಮೂರು ಯುನಿವರ್ಸಿಟಿ ಗಳಲ್ಲಿ ಸಾಹಿತ್ಯ, ಸಂಸ್ಕೃತಿಗಳಿಗೆ ಸಂಬಂಧಪಟ್ಟ ವಿಭಾಗಗಳನ್ನು ಮಾಡರಾಗಿದೆ. ಮತ್ತು ಎಲ್ಲಾ ಕಡೆಗಳಲ್ಲಿಯೂ ಎಲ್ಲ ವಿಷಯಗಳಿಗೆ ಸ್ನಾತಕೋತ್ತರ ವಿಭಾಗಗಳನ್ನು ತೆಗೆಯಬೇಕೆಂದೇನೂ ಇಲ್ಲ.

MISAPPROPRIATION IN AGGUNDA VILLAGE PANCHAYAT

112. SRI H. S. SIDDAPPA (Arsikere)—

Will the Minister for Community Development and Social Welfare be pleased to state.—

(a) the amount misappropriated in Aggunda Village Panchayat of Arsikere taluk by the Secretary of the Panchayat ;

(b) whether the Chairman of Village Panchayat has reported the fact to Government and also whether the Secretary has absconded ;

(c) if so, the date of report and the action taken by the concerned authorities in the matter so far ;

(d) whether any amount has been recovered from him and whether the Secretary has been traced ; if so, when ?

SRI N. RACHAIAH (Minister for Community Development and Social Welfare).—

(a) Rs. 2,422—14.

(b) (i) Reported to Deputy Commissioner.

(ii) Secretary has absconded.

(c) (i) 23-11-1973.

(ii) The official was kept under suspension and a warrant to arrest the Secretary, Sri Shivalinge Gowda has been issued by the Assistant Commissioner, Hassan.

(d) No.

Sri H. S. SIDDAPPA.—The reply to (b) is that the Secretary has absconded. ಸೆಕ್ರಟರಿ ಅಬಸ್ಕಾಂಡ್ ಆಗಿದ್ದಾರೆಯೇ ? ಮತ್ತು ಹಾಗೆ ಆಗಿದ್ದರೆ ಯಾವ ತಾರೀಕಿನಿಂದ ಅಬಸ್ಕಾಂಡ್ ಆಗಿದ್ದಾರೆ ?

† ಎನ್. ರಾಚಯ್ಯ.—ಆತ ಇನ್ನು ಕೂಡ ಸಿಗಲಿಲ್ಲ.

The Secretary assumed charge on 25-7-1971. He continued in that office till 28-9-1973. D ring this period he collected certain amounts, remitted certain amounts and appropriated certain amounts. He also drew certain amounts. He paid a portion of it and misappropriated certain amount. The total amount misap ropriated would be Rs. 2,422·14. Already a warrant has been issued and the party is not available. All efforts will be made to find out the person. He will be prosecuted as per law.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ಹೇಳಿದ ಪ್ರಕಾರ 28-9-1973ರ ತನಕ ಸೆಕ್ರೆಟರಿಯಾಗಿ ಕೆಲಸ ಮಾಡಿ ನಂತರ ಪೆವಾರಿಯಾಗಿ ಹಣ ದುರುಪಯೋಗ ಮಾಡಿದ್ದಾರೆ. ಆದರೆ ನಿಮ್ಮ ಅಧಿಕಾರಿಗಳಿಗೆ 28-9-1973 ರಿಂದ ಇಲ್ಲಿಯವರೆಗೆ ಆತನನ್ನು ಹಿಡಿಯುಲಕ್ಕೆ ಆಗಲಿಲ್ಲವೇ ?

ಶ್ರೀ ಎನ್. ರಾಚಯ್ಯ —ಡೆಪ್ಯುಟಿ ಕಮಿಷನರಿಗೆ 4-10-1973ರಲ್ಲಿ ರಿಪೋರ್ಟ್ ಬಂತು. ಬಂದ ತಕ್ಷಣ ಅರೆಸ್ಟ್ ಮಾಡಿದ್ದೇವೆ. ವಾರಂಟ್ ಇಷ್ಯೂ ಮಾಡಿದ್ದೇವೆ. ಆದನ್ನು ಪ್ರೋಲೀಸಿನವರಿಗೆ ರೆಫರ್ ಮಾಡಬೇಕೆಂದು ಆದೇಶವನ್ನು ಕಳುಹಿಸಿದ್ದೇವೆ. ಕೂಡಲೇ ಅವರನ್ನು ಅರೆಸ್ಟ್ ಮಾಡಿ ಈಗಾಗಲೇ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಇನ್ನೆಷ್ಟು ವರ್ಷಗಳೊಳಗೆ ಮಿಸ್‌ಅಪ್ರೋಪ್ರಿಯೇಟ್ ಆಗಿರುವುದನ್ನು ವಸೂಲು ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರಿಗಿಂತಲೂ ಹೆಚ್ಚಿನ ತೀವ್ರಗತಿಯಿಂದ ಈ ವಿಚಾರದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡು ಆ ಅಸಾಮಿಯನ್ನು ಪತ್ತೆ ಹಚ್ಚಿ ಪ್ರಾಸಿಕ್ಯೂಟ್ ಮಾಡುತ್ತೇವೆ. ಆ ಹಣವನ್ನು ಬಡ್ಡಿ ಸಹಿತ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಪ್ರಶ್ನೆ ನಂ. 57, ಮಾನ್ಯ ಕೆ. ಆರ್. ಶ್ರೀನಿವಾಸುಲು ನಾಯಿಡು ಅವರು ಹೇಳಬಹುದು.

Electric train around Bangalore City

Sri K. R. SRINIVASULU NAYUDU (Shanthingar).—

57. Will the Minister for Public Works and Electricity be pleased to state :—

(*a*) whether Government is considering any proposal to have electric train around Bangalore City with a view to remove traffic congestion in the City and if so, whether Government have made any recommendations to the Central Government to put such a railway line around Bangalore City ;

(*b*) if not, the practical difficulties before Government to have such a rail around Bangalore City ?

Sri H. M. CHANNABASAPPA (Minister for Public Works and Electricty).—

(*a*) Yes.

(*b*) The matter is under consideration in consultation with the Metropolitan Transport Team.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—(ಅ) ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದೆ. ಹಾಗಿದ್ದ ಪಕ್ಷದಲ್ಲಿ ಈ ಪ್ರಾಜೆಕ್ಟ್ ರಿಪೋರ್ಟ್ ತಯಾರಿಕೆಗೆ ಆಗುವ ಹಣವೆಷ್ಟು ? ಅದನ್ನು ಯಾವಾಗ ಮುಗಿಸುತ್ತೀರಾ ? ಅದರ ಬಗ್ಗೆ ವಿವರಗಳನ್ನು ಕೊಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಈಗ ಪ್ಲಾನಿಂಗ್ ಕಮಿಷನ್ನಿನ ಮುಂದೆ ಇದೆ. ಇದರ ಬಗ್ಗೆ ಸರ್ವೆ ಮಾಡಬೇಕೆಂಬ ವಿಷಯ ಬಂದಮೇಲೆ ಇದನ್ನು ಸರ್ವೆ ಮಾಡಿದಮೇಲೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.